# FORM A
# PUBLIC ANNOUNCEMENT

(Under Regulation 6 of the IBBI (Insolvency Resolution Process for Corporate Persons) Regulations, 2016

## FOR THE ATTENTION OF THE CREDITORS OF SHAPOS SERVICES PRIVATE LIMITED AND SHAPOS FARMS PRIVATE LIMITED

| RELEVANT PARTICULARS | | |
|---|---|---|
| 1. | Name of corporate debtors | Shapos Services Private Limited (SSPL) & Shapos Farms Private Limited (SFPL) |
| 2. | Date of incorporation of corporate debtors | SSPL: 13th May 2020<br>SFPL: 21st March 2022 |
| 3. | Authority under which corporate debtors are incorporated / registered | ROC- Bengaluru-Incorporated under the Companies Act, 2013 |
| 4. | Corporate Identity No. | SSPL: U74110KA2020PTC134121<br>SFPL: U51909KA2022PTC159010 |
| 5. | Address of the registered office and principal office (if any) of corporate debtors | Registered address: #1207/343, 9th Main, 7th Sector, HSR Layout, Bengaluru - 560102<br>Business Address: 30 Feet Cross Road, Harlur Main Road, Kasavanahalli, Varthur, Hobli Bengaluru - 560103 |
| 6. | Insolvency commencement date in respect of corporate debtors | 17th September 2024 |
| 7. | Estimated date of closure of insolvency resolution process | 16th March 2025 |
| 8. | Name and registration number of the insolvency professional acting as Interim Resolution Professional (IRP) | Ravindra Beleyur<br>IBBI/IPA-001/IP-P00189/2017-18/10368 |
| 9. | Address and e-mail of the Interim Resolution Professional, as registered with the Board | 'Shreevathsa', 428, 19th B Cross, 3rd Block, Jayanagar, Bengaluru - 560 011<br>Email : ravi@beleyur.com |
| 10. | Address and e-mail to be used for correspondence with the Interim Resolution Professional | Ravindra Beleyur<br>'Shreevathsa', 428,19th B Cross, 3d Block, Jayanagar, Bengaluru - 560 011<br>Tele: +91 80 26540193<br>Email: SSPL: cirp.shapos.services@beleyur.com<br>SFPL: cirp.shapos.farms@beleyur.com |
| 11. | Last date for submission of claims | 4th October 2024<br>Through website https://pda.nesl.co.in |
| 12. | Classes of creditors, if any, under clause (b) of sub-section (6A) of section 21, ascertained by the IRP | Not Applicable |
| 13. | Names of Insolvency Professionals identified to act as Authorised Representative of creditors in a class | Not Applicable |
| 14. | (a) Relevant Forms and<br>(b) Details of authorised representatives are available at: | a)Web link-https://pda.nesl.co.in<br>b) Not Applicable |

Notice is hereby given that the Hon'ble National Company Law Tribunal, Bengaluru has ordered the commencement of a Corporate Insolvency Resolution Process of Shapos Services Private Limited (SSPL) and its wholly owned subsidiary Shapos Farms Private Limited (SFPL) on 17th September 2024 (Order copy received 20th September 2024).

The creditors of SSPL and SFPL are hereby called upon to submit their claims with proof on or before 4th October 2024 to the Interim Resolution Professional at the address mentioned against entry No.10.

The financial creditors shall submit their claims with proof by electronic means only. All other creditors may submit the claims with proof in person, by post or by electronic means.

The Creditors are requested to submit their claims at website https://pda.nesl.co.in If in case of any query relating to uploading the same on PDA NeSL, the claimant can contact concerned person through telephone +91 81784 46956 or mail to ipsupport@nesl.co.in.

Submission of false or misleading proofs of claim shall attract penalties.

Sd/-
Ravindra Beleyur
Reg. No. IBBI/IPA-001/IP-P00189/2017-18/10368
Interim Resolution Professional
Shapos Services Private Limited under CIRP and Shapos Farms Private Limited CIRP

Date: 21st September 2024
Place: Bengaluru

# ಫಾರಂ-ಎ
# ಸಾರ್ವಜನಿಕ ಪ್ರಕಟಣೆ

[ಭಾರತೀಯ ಪಾಪರಿಕೆ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

## ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್‌ನ ಎಲ್ಲ ಕ್ರೆಡಿಟರುಗಳ ಗಮನಕ್ಕೆ

| ಸಂಬಂಧಪಟ್ಟ ವಿವರಗಳು | | |
|---|---|---|
| 1. | ಕಾರ್ಪೊರೇಟ್ ಸಾಲಗಾರ ಸಂಸ್ಥೆಗಳ ಹೆಸರು | ಶಾಪೋಸ್ ಸರ್ವೀಸಸ್ ಪ್ರೈ. ಲಿ. (SSPL)<br>ಶಾಪೋಸ್ ಫಾರ್ಮ್ಸ್ ಪ್ರೈ. ಲಿ. (SFPL) |
| 2. | ಸಾಲಗಾರ ಸಂಸ್ಥೆಗಳು ರಚನೆಯಾದ ದಿನಾಂಕ | SSPL: 13ನೇ ಮೇ 2020<br>SFPL: 21ನೇ ಮಾರ್ಚ್ 2022 |
| 3. | ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಗಳು ರಚನೆಯಾಗಿದೆ/ನೋಂದಾವಣಿಯಾಗಿದೆ | ROC- ಬೆಂಗಳೂರು-ಕಂಪನಿ ಕಾಯ್ದೆ 2013ರ ಅಡಿಯಲ್ಲಿ ಸಂಯೋಜಿಸಲಾಗಿದೆ |
| 4. | ಕಾರ್ಪೊರೇಟ್ ಗುರುತಿನ ಸಂಖ್ಯೆ | SSPL: U74110KA2020PTC134121<br>SFPL: U51909KA2022PTC159010 |
| 5. | ಸಾಲಗಾರ ಸಂಸ್ಥೆಗಳ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ | **ನೋಂದಾಯಿತ ಕಛೇರಿ:** #1207/343, 9ನೇ ಮುಖ್ಯರಸ್ತೆ, 7ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು – 560 102<br>**ಕಾರ್ಪೊರೇಟ್ ಕಛೇರಿ:** 30 ಅಡಿ ಅಡ್ಡ ರಸ್ತೆ, ಹರ್ಲೂರು ಮುಖ್ಯ ರಸ್ತೆ, ಕಸವನಹಳ್ಳಿ, ವರ್ತೂರು, ಹೋಬಳಿ, ಬೆಂಗಳೂರು– 560 103 |
| 6. | ಸಾಲಗಾರ ಸಂಸ್ಥೆಗಳ ದಿವಾಳಿತನ ಪ್ರಕ್ರಿಯೆ ಆರಂಭವಾದ ದಿನಾಂಕ | 17ನೇ ಸೆಪ್ಟೆಂಬರ್ 2024 |
| 7. | ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ | 16ನೇ ಮಾರ್ಚ್ 2025 |
| 8. | ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ | ರವೀಂದ್ರ ಬೆಳೆಯೂರ್<br>IBBI/IPA-001/IP-P00189/2017-18/10368 |
| 9. | ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್. | 'ಶ್ರೀವತ್ಸ',428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011.<br>ಇಮೇಲ್: ravi@beleyur.com |
| 10. | ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್ | ರವೀಂದ್ರ ಬೆಳೆಯೂರ್<br>'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇಬ್ಲಾಕ್, ಜಯನಗರ, ಬೆಂಗಳೂರು – 560 011,<br>ದೂರವಾಣಿ: +91 80 2654 0193<br>ಇಮೇಲ್: SSPL: cirp.shapos.services@beleyur.com<br>SFPL: cirp.shapos.farms@beleyur.com |
| 11. | ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ | 4ನೇ ಅಕ್ಟೋಬರ್ 2024<br>ವೆಬ್‌ಸೈಟ್ ಮೂಲಕ<br>https://pda.nesl.co.in |
| 12. | ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು | ಅನ್ವಯವಾಗುವುದಿಲ್ಲ |
| 13. | ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು | ಅನ್ವಯವಾಗುವುದಿಲ್ಲ |
| 14. | (ಎ) ಸಂಬಂಧಪಟ್ಟ ಫಾರಂಗಳು ಮತ್ತು<br>(ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ: | (ಎ) ವೆಬ್ ಲಿಂಕ್:https://pda.nesl.co.in<br>(ಬಿ) ಅನ್ವಯವಾಗುವುದಿಲ್ಲ |

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ (NCLT) ಬೆಂಗಳೂರು 17ನೇ ಸೆಪ್ಟೆಂಬರ್ 2024 ದಿನಾಂಕದ ತನ್ನ ಆದೇಶದ ಮೂಲಕ ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಕಾರ್ಪೋರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಈ ಕೆಳಗೆ ಸಹಿ ಮಾಡಿರುವವರನ್ನು ಮಧ್ಯಂತರ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. (ಆದೇಶ ಸ್ವೀಕರಿಸಿದ ದಿನಾಂಕ 20ನೇ ಸೆಪ್ಟೆಂಬರ್ 2024).

ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಸಾಲನೀಡಿದವರು 4ನೇ ಅಕ್ಟೋಬರ್ 2024ರಂದು ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಎಲ್ಲಾ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಗಳನ್ನು ವೆಬ್‌ಸೈಟ್ (https://pda.nesl.co.in) ಮುಖಾಂತರ ಸಲ್ಲಿಸಲು ಕೋರಿದೆ. ಕ್ಲೇಮುಗಳನ್ನು ಸಲ್ಲಿಸುವ ವಿಚಾರದಲ್ಲಿ ಹೆಚ್ಚಿನ ವಿವರಗಳಿಗಾಗಿ / ಪ್ರಶ್ನೆಗಳಿಗಾಗಿ ದೂರವಾಣಿ ಸಂಖ್ಯೆ +91 81784 46956 ಅಥವಾ ಇಮೇಲ್ ipsupport@nesl.co.in. ಅನ್ನುಸಂಪರ್ಕಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/–
ರವೀಂದ್ರ ಬೆಳೆಯೂರ್
Reg. No. IBBI/IPA-001/IP-P00189/2017-18/10368
ಮಧ್ಯಂತರ ಪರಿಹಾರ ವೃತ್ತಿಪರರು
(Interim Resolution Professional)
ಸಿಐಆರ್‌ಪಿ ಅಡಿಯಲ್ಲಿ
ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್

ದಿನಾಂಕ: 21ನೇ ಸೆಪ್ಟೆಂಬರ್ 2024
ಸ್ಥಳ: ಬೆಂಗಳೂರು

The public announcement was published on 23.09.2024 in the following newspapers:

- Deccan Herald (English) All Karnataka Editions
- Prajavani (Kannada) All Karnataka Editions

# Heavy rains wash away Kalaburagi farmers' hopes of good tur yield

## 30%-50% loss feared due to high moisture, disease in crops

VITTAL SHASTRI
KALABURAGI, DHNS

The above-normal rainfall has hit tur crop in Kalaburagi district, known as Karnataka's tur bowl.

The crop is cultivated on 70% of the agriculture fields in the district. Farmers say the yield per hectare will reduce drastically this year.

Stagnation of rainwater in the tur fields has increased moisture content in the crop.

In 2023-24, Karnataka produced 10.19 lakh tonnes of tur. The country's total production was 33.4 lakh tonnes.

The farmers struggled due to drought and flood in the last two to three years, which resulted in the average crop yield falling from 1,027 kg/hectare in 2020-21 to 873 kg/hectare last year.

Tur is grown on 6.06 lakh hectares (102.33% of the target), out of the total 8.9 lakh hectares of farm land in the district this year. Continuous rains have caused crop disease too.

Floods destroyed tur crops grown in the river basin as more water was released from Ujjani and Veer reservoirs in Maharashtra due to heavy rainfall there. The district has received 161 mm rainfall against the average 107 mm rainfall in June and 166 mm against the normal of 138 mm in July.

Though it received 137.7 mm rain in August, 12% less than normal, the downpour (28 mm) for three days in the beginning of September dealt a severe blow to the crop as lot of water got stagnated in the fields.

"Two weeks ago, a large quantity of rainwater accumulated in my 10-acre field. The growth of tur plants besides green gram and black gram plants (alternative crops) is severely affected as they are turning red due to high moisture content. The yield is expected to be reduced by half this year. The situation is the same in several parts of the district," said Srinivas Reddy, a farmer from Motakpalli in Sedam taluk.

The farmers are required to provide to the insurance company details of the crop loss within 72 hours of the calamity, for claims.


Tur crop damaged in Motakpalli village in Sedam taluk of Kalaburagi district.

IFFCO Tokio General Insurance Company has received 23,700 complaints in three days from September 1.

"We have started visiting the fields to assess the crop loss," the company's district officer Shivu S B said.

Karnataka Prantha Raitha Sangha district president Sharanabasappa Mamashetty claimed that there will be a 30% fall in yield of tur crop as fields in low-lying areas and river basins were inundated.

He sought an increase in the minimum support price of tur, fixed at Rs 7,550 per quintal by the government, as its market price has been hovering around Rs 11,000.

"The crop will wither if water stagnates in the farm land for a few more days. I have directed the officials to conduct a survey of the crop loss. Those who have taken crop insurance can approach the companies for claims," agriculture department joint director Samad Patel said.

# Quad announces 1st joint coast guard mission

Quad, from Page 1

New Delhi had in the past resisted US pressure to turn the Quad into a Nato-like security alliance for the Indo-Pacific and insisted on pursuing a benign agenda to counter China's bid to spread its military, political and economic influence in the Indo-Pacific.

The summit that Biden hosted in his hometown Wilmington in Delaware, however, saw India giving its nod to the launch of the first-ever Quad-at-Sea Ship Observer Mission in the Indo-Pacific in 2025. The personnel of the Japan Coast Guard, Australian Border Force, and Indian Coast Guard will spend time on board a US Coast Guard vessel operating in the Indo-Pacific.

The Quad leaders also indicated that the four nations would continue with similar missions in the Indo-Pacific in the future — a move that is likely to raise hackles in Beijing.

Modi avoided directly naming China. The joint statement issued by the leaders of the four maritime democracies also had no mention of the communist country even as it sent out a tacit but tough message to Beijing.

"We are seriously concerned about the situation in the East and South China Seas. We continue to express our serious concern about the militarisation of disputed features, and coercive and intimidating manoeuvres in the South China Sea," the four leaders said in the 'Wilmington Declaration' issued after the summit.

Biden was caught on a hot mic at the beginning of the summit, saying that China continued to "behave aggressively" in the South China Sea, the East China Sea, and the Taiwan Strait.

# B'luru fridge horror: Mystery deepens after husband's claim

Fridge horror, from Page 1

"She used to come to my shop once a month to see our daughter. After she moved out, the baby was with her for four months. Then I started looking after the child. Mahalakshmi had filed a complaint against me at the Nelamangala police station nearly nine months ago before she moved out," he said.

Without commenting on the husband's allegations, Deputy Commissioner of Police (Central) Shekhar H Tekkannavar said investigations were still underway. "As of now, [there are] no such leads. We are investigating from all angles and if any breakthrough we will update. Kindly don't believe in false news." Police are awaiting post-mortem and forensic examination reports to determine when the murder was committed. "Due to the nature of the crime, our investigators will also need time. But we are confident of cracking the case as soon as possible," a senior officer told *DH*.

Mahalakshmi and Das married five years ago and have a four-year-old girl. In October 2023, Mahalakshmi left husband and started living alone in Vyalikaval. The child lives with the father.

# Issue appointment orders for PSI posts: ACS to ADGP

BENGALURU, DHNS

The Additional Chief Secretary (Home) has directed the Additional Director General of Police (ADGP) to issue appointment orders to 545 candidates selected for PSI posts subject to the high court's final verdict on reservation to candidates of Hyderabad-Karnataka (under Article 371-J) region.

On June 26, the ADGP wrote to the ACS, seeking clarification on reservations to candidates from HK region.

Replying to this on Sept 26, the ACS said a notification had been issued on Jan 21, 2021, on appointments to 545 PSI posts. He said it had preceded the government's circular on Feb 1, 2023, by two years.

"Thus, subject to HC's judgment, recruitment should be done as per notification on June 6, 2020, by DPAR," the order by the ACS said.

## Don't publish list: Priyank

**Rural Development and Panchayat Raj (RDPR) Minister Priyank Kharge directed the ACS to not publish the names of candidates selected for the 545 PSI posts.**

**"There are several ambiguities in the many circulars passed by the DPAR regarding the rules and regulations to be followed by various departments while filling posts reserved for H-K region candidates."**

**Priyank noted that the matter was pending before the High Court. "To clarify these ambiguities, a cabinet sub-committee meeting has been convened on September 27. Till then, the recruitment should not take place," he added.**

# BJP says 'restless' Cong ordering probes into old cases to target its leaders

## Will soon expose graft in education department, says Ravi Kumar

BENGALURU, DHNS

Asserting that the ruling Congress was indulging in political vendetta by 'reopening old and closed cases,' former deputy chief minister Dr C N Ashwath Narayan and BJP chief whip in the Council N Ravi Kumar said on Sunday that the BJP was capable of fighting such cases politically and legally.

They were addressing reporters separately in the city. The two leaders were referring to the interrogation of BJP veteran B S Yediyurappa by the Lokayukta and the discovery of 292 fraudulent projects by the Maheshwara Rao committee, which is scrutinizing the operations at the Karnataka State Electronics Development Corporation Limited (Keonics) since November 2022.

Calling Siddaramaiah 'Hublot CM' and 'BDA redo scam CM,' Ashwath Narayan said that the CM should not forget his old cases that are lodged with the Lokayukta and transferred to the Anti-Corruption Bureau (ACB). After the closure of the ACB, these cases are yet to be investigated, he said.

"Siddaramaiah is stuck neck deep in corruption. I am not worried about the affairs in Keonics. It is a corporation and it has no link to the ministry I was in charge of," he said.

The former DCM said Siddaramaiah had become restless after his name cropped up in the MUDA scam.

**DR C N ASHWATH NARAYAN**
**Former deputy chief minister**



Siddaramaiah is stuck neck deep in corruption. I am not worried about the affairs in Keonics. It is a corporation and it has no link to the ministry I was in charge of

**N RAVI KUMAR**
**BJP chief whip in Council**

The Congress will expose itself if it continues to target leaders like Yediyurappa. The BJP will fight these politically motivated cases legally as well as politically. We will continue to expose the corrupt Congress much more in the next few days.

"Their (Congress') restlessness is palpable as they are ordering investigations into closed cases. I can say confidently that they will not succeed in their machinations," he said.

Ravi Kumar said that the ruling party was trying to target Yediyurappa by reopening cases against him.

"The Congress will expose itself if it continues to target leaders like Yediyurappa. The BJP will fight these politically motivated cases legally as well as politically. We will continue to expose the corrupt Congress much more in the next few days," he said.

Ravi Kumar warned that the BJP would soon release documents pertaining to a procurement scam that took place in the education department.

"We are in the process of collating documents," he said, without giving details.

# Anura Dissanayake to be Lanka's new Prez

Lanka, from Page 1

His immediate challenges include continuing his predecessor Ranil's efforts to bail out the battered economy, work with the IMF, reduce taxes as promised during his campaign and reach out to India, the country's closest geographical neighbour.

Though the JVP has long been known for fanning anti-India sentiments in Sri Lanka, strategic analysts say the new President cannot completely ignore India and will certainly mend fences with New Delhi. India has been extremely generous towards Colombo after the island faced a never-seen economic crisis in 2022.

Anura's ascent to Sri Lankan Presidency is meteoric as he secured a mere 3.2% votes in the 2019 Presidential polls that Gotabhaya Rajapaksa won easily. However, his key role in the 2022 Araghalya protests against the Rajapaksas and the political class caught the imagination of youngsters and old alike, who seem to have put their weight behind the Marxist-leaning party leader's "anti-corruption" plank.

The results also showed deep divisions between the majority Sinhala and minorities like Tamils and Muslims. While Sajith and Ranil secured more votes in Tamil-dominated Vanni, Jaffna, Trincomalee, and Batticaloa, it was AKD all the way in Sinhala-majority areas like Hambantota, the home district of the Rajapaksas. The new President swept 15 of the 22 districts, leaving just seven to his runner-up, Sajith.

"The dream we nurtured for a long time has finally come true. The victory is not an achievement of just one person's work, but the collective effort of hundreds of thousands of Sri Lankan citizens," AKD said in his first comments after the Election Commission declared him the winner.

He also instantly reached out to the minorities by harping on the need for a "fresh start" to "rewrite Sri Lankan history." "The unity of Sinhalese, Tamils, Muslims, and all Sri Lankans is the bedrock of this new beginning. The new renaissance we seek will rise from this shared strength and vision," he added.

Ranil, the veteran politician who was pushed to the third position, congratulated AKD on his victory after conceding defeat.

"I entrust to you the care of the beloved child, that is Sri Lanka," Ranil said. Namal Rajapaksa, son of former President Mahinda, was decimated in the elections, with the family continuing to be punished by the people for pushing the country to a brink.

# WEATHER

**Overview:** Rainfall occurred at a few places over Coastal & North Interior and at isolated places over South Interior Karnataka.

**Forecast Sep 23:** Light to moderate rain/thundershowers very likely to occur at many places over the remaining districts of Interior Karnataka.

**INTERIOR NORTH**

| Stations | Max | Min | Rain |
|---|---|---|---|
| Belagavi | 27.5 | 21.5 | 0.0 |
| Bidar | 29.8 | 21.4 | 16.6 |
| Vijayapura | 33.5 | 18.2 | 11.8 |
| Dharwad | 28.0 | 20.6 | 0.0 |
| Haveri | 32.0 | 22.6 | 0.0 |
| Kalaburagi | 31.6 | 23.0 | 15.2 |
| Raichur | 32.6 | 22.8 | 2.4 |
| **COASTAL** | | | |
| Honnavar | 30.9 | 24.1 | 0.6 |
| Karwar | 33.9 | 25.4 | 0.8 |
| Shirali | 32.3 | 18.4 | 5.4 |
| Mangaluru | 31.4 | 21.4 | 4.4 |

**INTERIOR SOUTH**

| Stations | Max | Min | Rain |
|---|---|---|---|
| Agumbe | NA | NA | NA |
| Bengaluru | 31.1 | 20.1 | 2.0 |
| Ballari | NA | NA | NA |
| Chamarajanagar | 32.2 | 20.1 | 0.0 |
| Chikkamagaluru | 27.6 | 17.8 | 0.0 |
| Chitradurga | 31.0 | 20.6 | 20.5 |
| Davangere | 31.0 | 20.0 | 4.2 |
| Hassan | 33.4 | 20.6 | 0.0 |
| Mysuru | 33.2 | NA | 0.0 |
| Madikeri | 28.2 | 17.7 | 5.5 |
| Kolar | 31.4 | 20.9 | 0.0 |

**OTHER STATIONS**

| Stations | Max | Min | Rain |
|---|---|---|---|
| New Delhi | 36.0 | 25.0 | NIL |
| Kolkata | 35.0 | 27.0 | 22 |
| Mumbai | 32.0 | 26.0 | 99 |
| Chennai | 34.0 | 28.0 | NA |
| Pune | 32.0 | 22.0 | NIL |
| Hyderabad | 31.0 | 22.0 | 61.5 |
| Th'puram | 33.0 | 25.0 | tr |


FORM A
PUBLIC ANNOUNCEMENT
(Under Regulation 6 of the IBBI (Insolvency Resolution Process for Corporate Persons) Regulations, 2016

FOR THE ATTENTION OF THE CREDITORS OF SHAPOS SERVICES PRIVATE LIMITED AND SHAPOS FARMS PRIVATE LIMITED

| RELEVANT PARTICULARS | | |
|---|---|---|
| 1. | Name of corporate debtors | Shapos Services Private Limited (SSPL) & Shapos Farms Private Limited (SFPL) |
| 2. | Date of incorporation of corporate debtors | SSPL: 13th May 2020<br>SFPL: 21st March 2022 |
| 3. | Authority under which corporate debtors are incorporated / registered | ROC- Bengaluru-Incorporated under the Companies Act, 2013 |
| 4. | Corporate Identity No. | SSPL: U74110KA2020PTC134121<br>SFPL: U51909KA2022PTC159010 |
| 5. | Address of the registered office and principal office (if any) of corporate debtors | Registered address: #1207/343, 9th Main, 7th Sector, HSR Layout, Bengaluru - 560102<br>Business Address: 30 Feet Cross Road, Harlur Main Road, Kasavanahalli, Varthur, Hobli Bengaluru - 560103 |
| 6. | Insolvency commencement date in respect of corporate debtors | 17th September 2024 |
| 7. | Estimated date of closure of insolvency resolution process | 16th March 2025 |
| 8. | Name and registration number of the insolvency professional acting as Interim Resolution Professional (IRP) | Ravindra Beleyur<br>IBBI/IPA-001/IP-P00189/2017-18/10368 |
| 9. | Address and e-mail of the Interim Resolution Professional, as registered with the Board | 'Shreevathsa', 428, 19th B Cross, 3rd Block, Jayanagar, Bengaluru - 560 011<br>Email : ravi@beleyur.com |
| 10. | Address and e-mail to be used for correspondence with the Interim Resolution Professional | Ravindra Beleyur<br>'Shreevathsa', 428,19th B Cross, 3d Block, Jayanagar, Bengaluru - 560 011<br>Tele: +91 80 26540193<br>Email: SSPL: cirp.shapos.services@beleyur.com<br>SFPL: cirp.shapos.farms@beleyur.com |
| 11. | Last date for submission of claims | 4th October 2024<br>Through website https://pda.nesl.co.in |
| 12. | Classes of creditors, if any, under clause (b) of sub-section (6A) of section 21, ascertained by the IRP | Not Applicable |
| 13. | Names of Insolvency Professionals identified to act as Authorised Representative of creditors in a class | Not Applicable |
| 14. | (a) Relevant Forms and<br>(b) Details of authorised representatives are available at: | a)Web link-https://pda.nesl.co.in<br>b) Not Applicable |

Notice is hereby given that the Hon'ble National Company Law Tribunal, Bengaluru has ordered the commencement of a Corporate Insolvency Resolution Process of Shapos Services Private Limited (SSPL) and its wholly owned subsidiary Shapos Farms Private Limited (SFPL) on 17th September 2024 (Order copy received 20th September 2024).

The creditors of SSPL and SFPL are hereby called upon to submit their claims with proof on or before 4th October 2024 to the Interim Resolution Professional at the address mentioned against entry No.10.

The financial creditors shall submit their claims with proof by electronic means only. All other creditors may submit the claims with proof in person, by post or by electronic means.

The Creditors are requested to submit their claims at website https://pda.nesl.co.in If in case of any query relating to uploading the same on PDA NeSL, the claimant can contact concerned person through telephone +91 81784 46956 or mail to ipsupport@nesl.co.in.

Submission of false or misleading proofs of claim shall attract penalties.

Sd/-
Ravindra Beleyur
Reg. No. IBBI/IPA-001/IP-P00189/2017-18/10368
Interim Resolution Professional
Shapos Services Private Limited under CIRP and Shapos Farms Private Limited CIRP

Date: 21st September 2024
Place: Bengaluru





### ತುಂಗಭದ್ರಾ ಜಲಾಶಯದ 19ನೇ ಗೇಟ್ ಅಳವಡಿಸಿದ ಅಧಿಕಾರಿಗಳು, ಕಾರ್ಮಿಕರಿಗೆ ಸನ್ಮಾನ

# ವರ್ಷದೊಳಗೆ ಹೊಸ ಕ್ರಸ್ಟ್‌ಗೇಟ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ನೆರೆಯ ಆಂಧ್ರಪ್ರದೇಶ, ತೆಲಂಗಾಣ ಮತ್ತು ತುಂಗಭದ್ರಾ ಮಂಡಳಿ ಜೊತೆ ಆದಷ್ಟು ಬೇಗನೆ ಚರ್ಚಿಸಿ ಒಂದು ವರ್ಷದೊಳಗೆ ತುಂಗಭದ್ರಾ ಜಲಾಶಯಕ್ಕೆ ಹೊಸ ತಂತ್ರಜ್ಞಾನದ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲಾಗುವುದು' ಎಂದು ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಬಾಗಿನ ಅರ್ಪಿಸಿದ ಬಳಿಕ ತಾಲ್ಲೂಕಿನ ಮುನಿರಾಬಾದ್‌ನಲ್ಲಿ ನಡೆದ 19ನೇ ಕ್ರಸ್ಟ್‌ಗೇಟ್ ಅಳವಡಿಕೆಗೆ ಶ್ರಮಿಸಿದ ಅಧಿಕಾರಿಗಳು, ಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ಒಂದು ಬಾರಿ ಅಳವಡಿಸಿದ ಗೇಟ್‌ಗಳ ಆಯಸ್ಸು 50 ವರ್ಷ. ಈಗ ಈ ಸಮಯ ಮುಗಿದು ಹೋಗಿದೆ' ಎಂದರು.

'ಕ್ರಸ್ಟ್‌ಗೇಟ್ ಕೊಚ್ಚಿ ಹೋಗಿದ್ದ ಘಟನೆಯ ಬಗ್ಗೆ ಕೇಂದ್ರ ತನಿಖಾ ತಂಡ ಜಲಾಶಯಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದು, ತ್ವರಿತವಾಗಿ ಗೇಟ್‌ಗಳನ್ನು ಬದಲಾಯಿಸಬೇಕು ಎನ್ನುವ ಸಲಹೆ ನೀಡಿದೆ. ಆದಷ್ಟು ಬೇಗನೆ ಈ ಕೆಲಸ ಮಾಡುತ್ತೇವೆ' ಎಂದರು.

'ಗೇಟ್ ಸುರಕ್ಷತಾ ತಜ್ಞ ಕನ್ನಯ್ಯ ನಾಯ್ಡು ಮುಂದಾಳತ್ವದಲ್ಲಿ ನಮ್ಮ ಅಧಿಕಾರಿಗಳು, ಖಾಸಗಿ ಕಂಪನಿಗಳು ಹಾಗೂ ನೂರಾರು ಕಾರ್ಮಿಕರು ಒಂದೇ ವಾರದಲ್ಲಿ ಗೇಟ್ ಅಳವಡಿಸಿದರು. ಜಲಾಶಯದ ಗೇಟ್ ಕೊಚ್ಚಿ ಹೋದಾಗ ಬಿಜೆಪಿಯವರು ಮಾಡಿದ್ದ ಎಲ್ಲ ಟೀಕೆಗಳೂ ಜಲಾಶಯದಲ್ಲಿ ಕೊಚ್ಚಿ ಹೋಗಿ ಕೆಲಸ ಮಾತ್ರ ಉಳಿದುಕೊಂಡಿದೆ. ದೇಶವೇ ಕುತೂಹಲದಿಂದ ನೋಡುತ್ತಿದ್ದ ಘಟನೆಯನ್ನು ನಮ್ಮ ತಂಡ ಸಮರ್ಥವಾಗಿ ನಿರ್ವಹಿಸಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅನಾರೋಗ್ಯದ ನಡುವೆಯೂ ಕನ್ನಯ್ಯ ನಾಯ್ಡು ಕಾರ್ಯಕ್ರಮದಲ್ಲಿ ಭಾಗಿಯಾಗಿ ಸರ್ಕಾರದ ಸನ್ಮಾನ ಸ್ವೀಕರಿಸಿದರು. 'ಕನಕಗಿರಿ ತಾಲ್ಲೂಕಿನ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣದ ಬಗ್ಗೆಯೂ ನೆರೆಯ ರಾಜ್ಯಗಳ ಜೊತೆ ಚರ್ಚಿಸುವೆ. ಈ ಯೋಜನೆ ಅನುಷ್ಠಾನಗೊಂಡರೆ ಕೆಲವು ರೈತರಿಗೆ ತೊಂದರೆಯಾಗುತ್ತದೆ. ರೈತರು ಸಹಕರಿಸಬೇಕು' ಎಂದು ಕೋರಿದರು.

**ಮುಖ್ಯಾಂಶಗಳು**

- ಬಿಜೆಪಿಯವರು ಮಾಡಿದ್ದ ಎಲ್ಲ ಟೀಕೆಗಳೂ ಜಲಾಶಯದಲ್ಲಿ ಕೊಚ್ಚಿ ಹೋಗಿದೆ: ಡಿಸಿಎಂ
- ಒಂದೇ ವಾರದಲ್ಲಿ ಗೇಟ್ ಅಳವಡಿಸಿದ ತಂಡಕ್ಕೆ ಡಿಕೆಶಿ ಮೆಚ್ಚುಗೆ

## ಸಚಿವರಿಗೆ ಮುಖ್ಯಮಂತ್ರಿ ಲೆಕ್ಕದ ಪಾಠ

ತುಂಗಭದ್ರಾ ಜಲಾಶಯದಿಂದ ಯಾವ ರಾಜ್ಯಕ್ಕೆ ಎಷ್ಟು ಎಕರೆ ಕೃಷಿಗೆ ಅನುಕೂಲವಾಗುತ್ತದೆ ಎನ್ನುವ ವಿಷಯವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ ಅಂಕಿ ಅಂಶಗಳನ್ನು ಹೇಳಿದ ಮುಖ್ಯಮಂತ್ರಿ ಇದು ಸರಿಯಿದೆಯಲ್ಲವೇ ಎಂದು ವೇದಿಕೆ ಮೇಲಿದ್ದವರನ್ನು ಪ್ರಶ್ನಿಸಿದರು.

ಆಗ ಸಿ.ಎಂ. ಬಳಿ ಬಂದ ಸಚಿವರಾದ ಎನ್.ಎಸ್. ಬೋಸರಾಜ, ಶಿವರಾಜ ತಂಗಡಗಿ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಒಂದೊಂದು ರೀತಿಯ ಅಂಕಿ ಅಂಶ ಹೇಳಿದರು. ಇದರಿಂದ ಗೊಂದಲಕ್ಕೆ ಒಳಗಾದ ಅವರು ಪಕ್ಕಾ ಲೆಕ್ಕ ಕೊಡಬೇಕು ಎಂದರು.

ಎಲ್ಲರ ಅಂಕಿಅಂಶಗಳನ್ನು ಪರಿಶೀಲಿಸಿದ ಸಿದ್ದರಾಮಯ್ಯ ಬಳಿಕ ಇಲಾಖೆ ಮುಖ್ಯಸ್ಥರಿಂದ ಮಾಹಿತಿ ತರಿಸಿಕೊಂಡು ಮೊದಲು ತಾವು ಹೇಳಿದ್ದ ಅಂಕಿಅಂಶಗಳು ಸರಿಯಿವೆ ಎಂದರು. ತಪ್ಪು ಮಾಹಿತಿ ಕೊಟ್ಟರೆ ನಿಮ್ಮ ಮೇಲೆಯೇ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಸಚಿವರತ್ತ ಮುಖಮಾಡಿ ಹೇಳಿದರು.

ಸರಿ ಮಾಹಿತಿಯನ್ನು ವಿವರಿಸಲು ರಾಯರಡ್ಡಿ ಪಕ್ಕದಲ್ಲಿಯೇ ಕುಳಿತಿದ್ದ ಡಿ.ಕೆ. ಶಿವಕುಮಾರ್ ಬಳಿ ಹೋದಾಗ ಅವರು ಕೈ ಮುಗಿದು ಹೋಗಿ ಕುಳಿತುಕೊಳ್ಳಿ ಎಂದು ಸಂಜ್ಞೆ ಮಾಡಿದರು.

### 'ದ್ವೇಷದ ರಾಜಕಾರಣ ಮಾಡುವುದಿಲ್ಲ'

ತಾಲ್ಲೂಕಿನ ಗಿಣಿಗೇರಾದಲ್ಲಿ ಭಾನುವಾರ ಏರ್ ಸ್ಟ್ರಿಪ್‌ನಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಾಸಕ ಮುನಿರತ್ನ ಅವರನ್ನು ಸರ್ಕಾರ ಬಂಧಿಸಿದ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ 'ನಾವು ಯಾರ ವಿರುದ್ಧವೂ ದ್ವೇಷದ ರಾಜಕಾರಣ ಮಾಡುವುದಿಲ್ಲ. ಅಪರಾಧ ಮಾಡಿ ಎಂದು ನಾವು ಯಾರಿಗೂ ಹೇಳಿಲ್ಲ' ಎಂದರು.

ತಜ್ಞರ ವರದಿ ಆಧಾರದ ಮೇಲೆ ತುಂಗಭದ್ರಾ ಗೇಟ್‌ಗಳ ನಿರ್ವಹಣೆ ಮಾಡಲಾಗುವುದು. ಇನ್ನೂ ಮಳೆ ಬರುತ್ತದೆ. ಎರಡನೇ ಬೆಳೆಗೂ ನೀರು ಲಭಿಸುತ್ತದೆ
**ಸಿದ್ದರಾಮಯ್ಯ,** ಮುಖ್ಯಮಂತ್ರಿ

ನಮ್ಮ ಸರ್ಕಾರವನ್ನು ಬೀಳಿಸಲು ಯಾರಿಂದಲೂ ಸಾಧ್ಯವಿಲ್ಲ. ಮುಂದಿನ ಹತ್ತು ವರ್ಷ ನಾವೇ ಆಡಳಿತ ಮಾಡುತ್ತೇವೆ. ಆಗ ಪ್ರತಿಬಾರಿಯೂ ನಾವೇ ಬಂದು ಬಾಗಿನ ಅರ್ಪಿಸುತ್ತೇವೆ
**ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

## ಕಾರ್ಯಕ್ರಮಕ್ಕೆ ಬಾರದೆ ಶಾಸಕ ಬಂಡಾಯ


ಎಚ್‌.ಆರ್. ಗವಿಯಪ್ಪ

ಹೊಸಪೇಟೆ (ವಿಜಯನಗರ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಮಧ್ಯಾಹ್ನ ತುಂಗಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಿದಾಗ ಸ್ಥಳೀಯ ಶಾಸಕ ಎಚ್‌.ಆರ್.ಗವಿಯಪ್ಪ ಗೈರಾಗುವ ಮೂಲಕ ಸರ್ಕಾರದ ವಿರುದ್ಧ ತಮ್ಮ ಅಸಮಾಧಾನದ ಜತೆಗೆ ಬಂಡಾಯವನ್ನು ಬಹಿರಂಗವಾಗಿ ಪ್ರದರ್ಶಿಸಿದರು.

ಬೆಳಿಗ್ಗೆ ತಮ್ಮ ಜತೆ ಕೆಲವು ಅನುಯಾಯಿಗಳನ್ನು ಅಣೆಕಟ್ಟೆ ಸಮೀಪಕ್ಕೆ ಬಿಡದ ಕಾರಣಕ್ಕೆ ಶಾಸಕರು ಅಣೆಕಟ್ಟೆ ಸಮೀಪಕ್ಕೆ ಹೋದವರು ವಾಪಸ್ ಗೇಟ್‌ನತ್ತ ಬಂದರು. ಸ್ಥಳದಲ್ಲಿದ್ದ ಡಿವೈಎಸ್‌ಪಿ ಸಹಿತ ಪೊಲೀಸರ ಜತೆಗೆ ವಾಗ್ವಾದ ನಡೆಸಿದ ಶಾಸಕರು, ತಮ್ಮ ಹಿಂಬಾಲಕರನ್ನು ಒಳಗೆ ಬಿಡುವ ಲಕ್ಷಣ ಇಲ್ಲ ಎಂದು ಕಂಡುಬಂದಾಗ ತಾವೂ ಹೊರನಡೆದು ತಮ್ಮ ಕಚೇರಿಗೆ ಬಂದು ಕುಳಿತುಬಿಟ್ಟರು.

ಸ್ವತಃ ಡಿವೈಎಸ್‌ಪಿ, ತಹಶೀಲ್ದಾರ್, ಎಸ್‌ಪಿ ಮತ್ತು ಡಿಸಿ ಅವರು ಶಾಸಕರ ಕಚೇರಿಗೆ ತೆರಳಿ ಮನವೊಲಿಸಲು ಪ್ರಯತ್ನಿಸಿದರೂ ಅವರು ಸಮಾಧಾನಗೊಳ್ಳಲಿಲ್ಲ. ಮುಖ್ಯಮಂತ್ರಿ ಅವರು ಬರುವುದು ಎರಡು ಗಂಟೆ ವಿಳಂಬವಾಗಲಿದೆ ಎಂಬ ಮಾಹಿತಿ ಇದ್ದ ಕಾರಣ ಸಿಎಂ, ಡಿಸಿಎಂ ಬರುವ ಹೊತ್ತಿಗೆ ಶಾಸಕರು ಬರಬಹುದು ಎಂಬ ನಿರೀಕ್ಷೆ ಇತ್ತು. ಟಿ.ಬಿ.ಡ್ಯಾಂ ಗೇಟ್ ಸಮೀಪದಲ್ಲೇ ಸಿದ್ದರಾಮಯ್ಯ ಅವರನ್ನು ಎದುರುಗೊಂಡ ಶಾಸಕರು ಹೂಗುಚ್ಛ ನೀಡಿದರೂ, ಅವರ ಜತೆಗೆ ಅಣೆಕಟ್ಟೆಗೆ ಬರಲಿಲ್ಲ.

## ಸುದ್ದಿ 2 ನಿಮಿಷ

### ಸಮಗ್ರ ವಿಶ್ವವಿದ್ಯಾಲಯ ಸ್ಥಾಪಿಸಿ: ಬಸವರಾಜ ಹೊರಟ್ಟಿ

ಧಾರವಾಡ: 'ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಇವೆಲ್ಲವು ಒಂದೇ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರಬೇಕು. ಇವೆಲ್ಲವನ್ನು ಒಟ್ಟುಗೂಡಿಸಿ ಒಂದು ಸಮಗ್ರ ವಿಶ್ವವಿದ್ಯಾಲಯ ಸ್ಥಾಪಿಸಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಭಾನುವಾರ ಕೃಷಿ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ 'ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಇವೆಲ್ಲವೂ ಒಂದೇ ಕಡೆ ಇದ್ದರೆ ಅನುಕೂಲವಾಗುತ್ತದೆ. ಅಂತರ್‌ಶಿಸ್ತೀಯ ಅಧ್ಯಯನ, ಪ್ರಾಯೋಗಿಕವಾಗಿ ವಿಷಯಗಳ ಮನನ ಎಲ್ಲದಕ್ಕೂ ಸಹಕಾರಿಯಾಗುತ್ತದೆ. ಕೃಷಿ ವಿಶ್ವವಿದ್ಯಾಲಯಗಳು ರೈತರಿಗಾಗಿ ಮೂರು ಅಥವಾ ಆರು ತಿಂಗಳಿಗೊಮ್ಮೆ ಕಮ್ಮಟ ಏರ್ಪಡಿಸಬೇಕು' ಎಂದರು.



'ಹಲವು ರೈತರು ಕೃಷಿಯಿಂದ ವಿಮುಖರಾಗಿದ್ದಾರೆ, ಜಮೀನು ಮಾರಾಟ ಮಾಡಿದ್ದಾರೆ. ರೈತರು ಬೆಳೆದ ಎಲ್ಲ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸಿಗುವಂತೆ ಮಾಡಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಎನ್‌ಆರ್‌ಇ-ಜಿ) ಕಾರ್ಮಿಕರು ಜಮೀನಿನಲ್ಲಿ ಕೆಲಸ ಮಾಡಿ ರೈತರಿಂದ ಪಗಾರ ಪಡೆಯುವಂತೆ ಮಾಡಬೇಕು' ಎಂದು ಹೇಳಿದರು.

### ಕಾರವಾರ: ಉದ್ಯಮಿ ಹತ್ಯೆ

ಕಾರವಾರ: ತಾಲ್ಲೂಕಿನ ಹಣಕೋಣ ಗ್ರಾಮದಲ್ಲಿ ಭಾನುವಾರ ನಸುಕಿನ ಜಾವ ಉದ್ಯಮಿ ವಿನಾಯಕ ನಾಯ್ಕ ಯಾನೆ ರಾಜು ನಾಯ್ಕ (58) ಎಂಬುವವರನ್ನು ದುಷ್ಕರ್ಮಿಗಳ ಗುಂಪೊಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದೆ.

ಮಹಾರಾಷ್ಟ್ರದ ಪುಣೆಯಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ಆಮದು, ರಫ್ತು ವಹಿವಾಟು ನಡೆಸುತ್ತಿರುವ ಉದ್ಯಮಿ ತನ್ನ ಮೂಲ ಊರು ಹಣಕೋಣಕ್ಕೆ ಸಾತೇರಿ ದೇವಿ ಜಾತ್ರೆಗೆ ವಾರದ ಹಿಂದೆ ಬಂದಿದ್ದರು. ಭಾನುವಾರ ಪುಣೆಗೆ ಹೊರಡಲು ಸಿದ್ಧರಾಗಿದ್ದರು. ನಸುಕಿನ ಜಾವ 5.30ರ ಸುಮಾರಿಗೆ ಅವರ ಹತ್ಯೆ ಮಾಡಲಾಗಿದೆ.

'ನಾಲ್ಕರಿಂದ ಐದು ಜನರಿದ್ದ ಗುಂಪೊಂದು ಮನೆಗೆ ನುಗ್ಗಿ ಕೃತ್ಯ ನಡೆಸಿದೆ. ವಿನಾಯಕ ಅವರ ಪತ್ನಿ ವೃಶಾಲಿ ನಾಯ್ಕ (50) ಅವರ ಮೇಲೆಯೂ ಹಲ್ಲೆ ನಡೆಸಲಾಗಿದೆ. ಘಟನೆ ನಡೆದ ವೇಳೆ ಇವರಿಬ್ಬರೇ ಮನೆಯಲ್ಲಿದ್ದರು' ಎಂದು ಚಿತ್ತಾಕುಲ ಠಾಣೆ ಪೊಲೀಸರು ತಿಳಿಸಿದ್ದಾರೆ.



**ಕೃಷಿ ಮೇಳ** ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಭಾನುವಾರ ಪಾಲ್ಗೊಂಡಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರ, ಗೋವಿಂದರಾಜ ಜವಳಿ

## ಈಶ್ವರಪ್ಪಗೆ ಅನ್ಯಾಯ: ಯತ್ನಾಳ

ಪ್ರಜಾವಾಣಿ ವಾರ್ತೆ


ಬಸನಗೌಡ ಪಾಟೀಲ

ಜಮಖಂಡಿ (ಬಾಗಲಕೋಟೆ ಜಿಲ್ಲೆ): 'ಮಾಜಿ ಉಪಮುಖ್ಯ ಮಂತ್ರಿ ಕೆ.ಎಸ್. ಈಶ್ವರಪ್ಪನವರಿಗೆ ಬಿಜೆಪಿಯಲ್ಲಿ ಅನ್ಯಾಯವಾಗಿದೆ. ಆ ಅನ್ಯಾಯವನ್ನು ಸರಿಪಡಿಸಿ ಮುಂದಿನ ದಿನಗಳಲ್ಲಿ ಅವರನ್ನು ಮತ್ತೆ ಬಿಜೆಪಿಗೆ ಕರೆದುಕೊಂಡು ಹೋಗುತ್ತೇವೆ. ಸಿದ್ದರಾಮಯ್ಯನವರ ಬಳಿಕ ರಾಜ್ಯದಲ್ಲಿ ಈಶ್ವರಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆ, ಅವರನ್ನು ಯಾವ ಕಾರಣಕ್ಕೂ ಬಿಟ್ಟು ಕೊಡುವುದಿಲ್ಲ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ತಾಲ್ಲೂಕಿನ ಜಕನೂರ ಗ್ರಾಮದ ಮಾದಣ್ಣ ಮದಗುಂಡೇಶ್ವರ ಸಿದ್ಧಾಶ್ರಮದಲ್ಲಿ ಶನಿವಾರ ಸಂಜೆ ಹಮ್ಮಿಕೊಂಡಿದ್ದ ಭಂಡಾರ ಸಂಸ್ಕೃತಿ ಉತ್ಸವ, ಜಾನಪದ ಮತ್ತು ಡೊಳ್ಳಿನ ಕಲಾಮಹೋತ್ಸವ, 29ನೇ 'ಸಿದ್ಧಸಿರಿ' ಸಂಭ್ರಮದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಿತ್ತೂರು ರಾಣಿ ಚನ್ನಮ್ಮ ವಂಶಸ್ಥರಾದ ನಾವು ಪಂಚಮಸಾಲಿಗಳು ಗಟ್ಟಿಯಾಗಿ ನಿಮ್ಮ ಬೆನ್ನಹಿಂದೆ ನಿಲ್ಲುತ್ತೇವೆ. ನಿಮ್ಮನ್ನು ಮುಖ್ಯಮಂತ್ರಿ ಮಾಡಿ ನಾನು ಸಚಿವನಾಗುತ್ತೇನೆ. ರಾಯಣ್ಣ ಬ್ರಿಗೇಡ್ ಮಾಡಿದಾಗ ನಿಮಗೆ ತೊಂದರೆ ನೀಡಿರುವವರ ಬಗ್ಗೆ ಎಲ್ಲರಿಗೂ ಗೊತ್ತಿದೆ. ನಾವು ಹಾಗೂ ರಮೇಶ ಜಾರಕಿಹೊಳಿ ಸೇರಿದಂತೆ ಬೇರೆ ಹೊಂದಾಣಿಕೆಯ ಟೀಂ ಮಾಡಿಕೊಂಡಿದ್ದೇವೆ. ಸರಿಯಾದ ಸಮಯಕ್ಕೆ ಕಾಯುತ್ತಿದ್ದೇವೆ' ಎಂದು ಹೇಳಿದರು.

ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಮಾತನಾಡಿ, 'ಈಗಿನ ಬಿಜೆಪಿ ರಾಜ್ಯಾಧ್ಯಕ್ಷರ ಮೇಲೆ ಯಾರಿಗೂ ಮನಸ್ಸಿಲ್ಲ. ಅವರು ಸೂಕ್ತ ವ್ಯಕ್ತಿಯೂ ಅಲ್ಲ' ಎಂದರು.

### 'ರಾಯಣ್ಣ ಚನ್ನಮ್ಮ ಬ್ರಿಗೇಡ್ ಶೀಘ್ರ'

ವಿಜಯಪುರ: 'ರಾಜ್ಯದಲ್ಲಿ ಹಿಂದುಳಿದವರಿಗೆ, ದಲಿತರಿಗೆ, ಬ್ರಾಹ್ಮಣರಿಗೆ ಮತ್ತು ಲಿಂಗಾಯತರಿಗೆ ಅನ್ಯಾಯ ವಾಗುವುದನ್ನು ತಡೆಯುವ ನಿಟ್ಟಿನಲ್ಲಿ ಶೀಘ್ರದಲ್ಲೇ ಆರ್‌ಸಿಬಿ (ರಾಯಣ್ಣ ಚನ್ನಮ್ಮ ಬ್ರಿಗೇಡ್) ಅಸ್ತಿತ್ವಕ್ಕೆ ಬರಲಿದೆ' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

'ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಕೂಡ ಈಶ್ವರಪ್ಪ ಮತ್ತು ಬಸನಗೌಡ ಪಾಟೀಲ ಯತ್ನಾಳ ಸೇರಿ ಆರ್‌ಸಿಬಿ ಸ್ಥಾಪಿಸುವಂತೆ ಸಲಹೆ ನೀಡಿದ್ದಾರೆ. ಈ ಬಗ್ಗೆ ಬೆಂಬಲಿಗರೊಂದಿಗೆ ಚರ್ಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

## ರಾಜಭವನದಿಂದಲೇ ಪತ್ರ ಸೋರಿಕೆ: ಸಿ.ಎಂ

ಒಂದನೇ ಪುಟದಿಂದ...

'ತನಿಖೆ ಮತ್ತು ವಿಚಾರಣೆಗೆ ಅನುಮತಿ ನೀಡಿ ಎಂದು ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಮನವಿಗಳ ವಿವರ ಮತ್ತು ದಿನಾಂಕಗಳ ಗೋಪ್ಯ ಮಾಹಿತಿ ರಾಜ್ಯ ಸರ್ಕಾರಕ್ಕೆ ಗೊತ್ತಾಗಿದ್ದು ಹೇಗೆ' ಎಂದು ಪ್ರಶ್ನಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ರಾಜ್ಯ ಸರ್ಕಾರಕ್ಕೆ ಇತ್ತೀಚೆಗೆ ಪತ್ರ ಬರೆದಿದ್ದರು.

ಈ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಚ್‌.ಎಸ್.ಕೆಂಪಣ್ಣ ಆಯೋಗ ಸಲ್ಲಿಸಿರುವ ವರದಿ ಮತ್ತು ದಾಖಲೆಗಳನ್ನು ಸಲ್ಲಿಸಿ ಎಂದು ರಾಜ್ಯಪಾಲ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ಪತ್ರ ಬರೆದಿದ್ದರು. ಈ ಪತ್ರವನ್ನು ಉಲ್ಲೇಖಿಸಿ ನಗರಾಭಿವೃದ್ಧಿ ಇಲಾಖೆಯು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪತ್ರ ಬರೆದಿತ್ತು. ಈ ಎರಡೂ ಪತ್ರಗಳ ಸಂಬಂಧ ಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿತ್ತು. ಅದರ ಬೆನ್ನಲ್ಲೇ ಸಿದ್ದರಾಮಯ್ಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ತಾವು ಬರೆದ ಪತ್ರ ಸೋರಿಕೆಯಾಗಿದೆ ಎಂದು ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ. ರಾಜ್ಯಪಾಲರು ಪತ್ರ ಬರೆದಿರುವ ವಿಚಾರವನ್ನು ನಾನೂ ಪತ್ರಿಕೆಯಲ್ಲಿ ಓದಿ ತಿಳಿದಿದ್ದೇನೆ' ಎಂದಿದ್ದಾರೆ.


ಫಾರಂ–ಎ
ಸಾರ್ವಜನಿಕ ಪ್ರಕಟಣೆ
[ಭಾರತೀಯ ಪಾಪರಿಕೆ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್‌ನ ಎಲ್ಲ ಕ್ರೆಡಿಟರುಗಳ ಗಮನಕ್ಕೆ

| ಸಂಬಂಧಪಟ್ಟ ವಿವರಗಳು | | |
|---|---|---|
| 1. | ಕಾರ್ಪೊರೇಟ್ ಸಾಲಗಾರ ಸಂಸ್ಥೆಗಳ ಹೆಸರು | ಶಾಪೋಸ್ ಸರ್ವೀಸಸ್ ಪ್ರೈ. ಲಿ. (SSPL)<br>ಶಾಪೋಸ್ ಫಾರ್ಮ್ಸ್ ಪ್ರೈ. ಲಿ. (SFPL) |
| 2. | ಸಾಲಗಾರ ಸಂಸ್ಥೆಗಳು ರಚನೆಯಾದ ದಿನಾಂಕ | SSPL: 13ನೇ ಮೇ 2020<br>SFPL: 21ನೇ ಮಾರ್ಚ್ 2022 |
| 3. | ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಗಳು ರಚನೆಯಾಗಿದೆ/ನೋಂದಾವಣಿಯಾಗಿದೆ | ROC- ಬೆಂಗಳೂರು–ಕಂಪನಿ ಖಾಯ್ದೆ 2013ರ ಅಡಿಯಲ್ಲಿ ಸಂಯೋಜಿಸಲಾಗಿದೆ |
| 4. | ಕಾರ್ಪೊರೇಟ್ ಗುರುತಿನ ಸಂಖ್ಯೆ | SSPL: U74110KA2020PTC134121<br>SFPL: U51909KA2022PTC159010 |
| 5. | ಸಾಲಗಾರ ಸಂಸ್ಥೆಗಳ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ | **ನೋಂದಾಯಿತ ಕಛೇರಿ:** #1207/343, 9ನೇ ಮುಖ್ಯರಸ್ತೆ, 7ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು – 560 102<br>**ಕಾರ್ಪೊರೇಟ್ ಕಛೇರಿ:** 30 ಅಡಿ ಅಡ್ಡ ರಸ್ತೆ, ಹರ್ಲೂರು ಮುಖ್ಯ ರಸ್ತೆ, ಕಸವನಹಳ್ಳಿ, ವರ್ತೂರು, ಹೋಬಳಿ, ಬೆಂಗಳೂರು– 560 103 |
| 6. | ಸಾಲಗಾರ ಸಂಸ್ಥೆಗಳ ದಿವಾಳಿತನ ಪ್ರಕ್ರಿಯೆ ಆರಂಭವಾದ ದಿನಾಂಕ | 17ನೇ ಸೆಪ್ಟೆಂಬರ್ 2024 |
| 7. | ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ | 16ನೇ ಮಾರ್ಚ್ 2025 |
| 8. | ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ | ರವೀಂದ್ರ ಬೆಳೆಯೂರ್<br>IBBI/IPA-001/IP-P00189/2017-18/10368 |
| 9. | ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್. | 'ಶ್ರೀವತ್ಸ',428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011.<br>ಇಮೇಲ್: ravi@beleyur.com |
| 10. | ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್ | ರವೀಂದ್ರ ಬೆಳೆಯೂರ್<br>'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇಬ್ಲಾಕ್, ಜಯನಗರ, ಬೆಂಗಳೂರು – 560 011,<br>ದೂರವಾಣಿ: +91 80 2654 0193<br>ಇಮೇಲ್: SSPL: cirp.shapos.services@beleyur.com<br>SFPL: cirp.shapos.farms@beleyur.com |
| 11. | ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ | 4ನೇ ಅಕ್ಟೋಬರ್ 2024<br>ವೆಬ್‌ಸೈಟ್ ಮೂಲಕ<br>https://pda.nesl.co.in |
| 12. | ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು | ಅನ್ವಯವಾಗುವುದಿಲ್ಲ |
| 13. | ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು | ಅನ್ವಯವಾಗುವುದಿಲ್ಲ |
| 14. | (ಎ) ಸಂಬಂಧಪಟ್ಟ ಫಾರಂಗಳು ಮತ್ತು<br>(ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ: | (ಎ) ವೆಬ್ ಲಿಂಕ್:https://pda.nesl.co.in<br>(ಬಿ) ಅನ್ವಯವಾಗುವುದಿಲ್ಲ |

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ (NCLT) ಬೆಂಗಳೂರು 17ನೇ ಸೆಪ್ಟೆಂಬರ್ 2024 ದಿನಾಂಕದ ತನ್ನ ಆದೇಶದ ಮೂಲಕ ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಈ ಕೆಳಗೆ ಸಹಿ ಮಾಡಿರುವವರನ್ನು ಮಧ್ಯಂತರ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. (ಆದೇಶ ಸ್ವೀಕರಿಸಿದ ದಿನಾಂಕ 20ನೇ ಸೆಪ್ಟೆಂಬರ್ 2024).

ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಸಾಲನೀಡಿದವರು 4ನೇ ಅಕ್ಟೋಬರ್ 2024ರಂದು ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಎಲ್ಲಾ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಗಳನ್ನು ವೆಬ್‌ಸೈಟ್ (https://pda.nesl.co.in) ಮುಖಾಂತರ ಸಲ್ಲಿಸಲು ಕೋರಿದೆ. ಕ್ಲೇಮುಗಳನ್ನು ಸಲ್ಲಿಸುವ ವಿಚಾರದಲ್ಲಿ ಹೆಚ್ಚಿನ ವಿವರಗಳಿಗಾಗಿ / ಪ್ರಶ್ನೆಗಳಿಗಾಗಿ ದೂರವಾಣಿ ಸಂಖ್ಯೆ +91 81784 46956 ಅಥವಾ ಇಮೇಲ್ ipsupport@nesl.co.in. ಅನ್ನುಸಂಪರ್ಕಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/–
ರವೀಂದ್ರ ಬೆಳೆಯೂರ್
Reg. No. IBBI/IPA-001/IP-P00189/2017-18/10368
ಮಧ್ಯಂತರ ಪರಿಹಾರ ವೃತ್ತಿಪರರು
(Interim Resolution Professional)
ಸಿಐಆರ್‌ಪಿ ಅಡಿಯಲ್ಲಿ
ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್

ದಿನಾಂಕ: 21ನೇ ಸೆಪ್ಟೆಂಬರ್ 2024
ಸ್ಥಳ: ಬೆಂಗಳೂರು


## ಹರಾಜು: ₹1,500 ಕೋಟಿ ಸಂಗ್ರಹ?

ಒಂದನೇ ಪುಟದಿಂದ...

1987ರ ರಾಜ್ಯ ಸರ್ಕಾರದ ಆದೇಶದ ಅನ್ವಯ ಇಲಾಖೆಯು 4,206 ಮದ್ಯದಂಗಡಿಗಳಿಗೆ ಪರವಾನಗಿ ನೀಡಬೇಕಿದೆ. ಈ ಕೋಟಾದಡಿ 133 ಪರವಾನಗಿ ಕೊಡಲು ಇನ್ನೂ ಬಾಕಿ ಇವೆ. 102 ಪರವಾನಗಿಗಳು ಸ್ಥಗಿತಗೊಂಡಿವೆ. ಹೀಗೆ, ಎಂಎಸ್‌ಐಎಲ್ ಮತ್ತು ಸ್ಥಗಿತಗೊಂಡಿರುವ ಸಿಎಲ್ 2 (ವೈನ್ ಶಾಪ್) ಸೇರಿ ಒಟ್ಟು 506 ಪರವಾನಗಿಗಳನ್ನು ಖಾಸಗಿಯವರಿಗೆ ಹರಾಜು ಅಥವಾ ಲಾಟರಿ ಮೂಲಕ ನೀಡುವ ಕುರಿತು ಪ್ರಸ್ತಾವವನ್ನು ಸಿದ್ಧಪಡಿಸಲಾಗಿದೆ ಎಂದು ಅವರು ವಿವರಿಸಿದರು.

ಮದ್ಯದಂಗಡಿ ತೆರೆಯಲು ಎಂಎಸ್‌ಐಎಲ್‌ಗೆ ಪರವಾನಗಿ ನೀಡದಿರಲು ಇದೇ ಮಾರ್ಚ್‌ನಲ್ಲಿ ನಿರ್ಧರಿಸಲಾಗಿದೆ. ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದ ನಂತರದಿಂದ ಈವರೆಗೆ ಯಾವುದೇ ಹೊಸ ಮದ್ಯದಂಗಡಿಗಳಿಗೆ ಪರವಾನಗಿ ಕೊಟ್ಟಿಲ್ಲ. ಪರವಾನಗಿ ಹೊಂದಿದವರ ಕುಟುಂಬದದಲ್ಲಿನ ಸಂಘರ್ಷ, ಯಾರ ಹೆಸರಿಗೆ ಸನ್ನದು ವರ್ಗಾಯಿಸಬೇಕೆಂಬ ವಿವಾದ, ಶುಲ್ಕ ಕಟ್ಟಲು ಹಣ ಇಲ್ಲದಿರುವುದು, ಸನ್ನದು ಹೊಂದಿದವರ ಮಕ್ಕಳು ಸರ್ಕಾರಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿರುವ ಕಾರಣಕ್ಕೆ ಅವರು ಹೊಂದಿರುವ ಮದ್ಯದಂಗಡಿಗಳು ನವೀಕರಣಗೊಳ್ಳದೆ ಮುಚ್ಚಿವೆ. ಈ ಪೈಕಿ, ಕೆಲವು ಮದ್ಯದಂಗಡಿಗಳ ಪರವಾನಗಿ 1979ರಿಂದಲೂ ನವೀಕರಣ ಆಗಿಲ್ಲ. ಅಂಥವರಿಗೆ ಶುಲ್ಕ ಪಾವತಿಸಿ ಪರವಾನಗಿ ನವೀಕರಿಸಲು ಒಂದು ಬಾರಿಗೆ ಮಾತ್ರ ಒಂದು ತಿಂಗಳ ಅವಕಾಶ ನೀಡಲು ಚಿಂತನೆ ನಡೆದಿದೆ. ಒಂದು ತಿಂಗಳ ಒಳಗೆ ನವೀಕರಿಸಿಕೊಳ್ಳದಿದ್ದರೆ ಪರವಾನಗಿಯನ್ನು ವಾಪಸ್ ಪಡೆದು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದೂ ಅವರು ತಿಳಿಸಿದರು.

ಜಿಲ್ಲೆಯೊಂದರಲ್ಲಿ ನಾಲ್ಕು ಜಾಗಗಳನ್ನು ಗುರುತಿಸಿ, ಅಲ್ಲಿ ಮದ್ಯದಂಗಡಿ ತೆರೆಯಲು ಅನುಮತಿ ನೀಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಲಾಗುವುದು. ಯಾರು ಬೇಕಾದರೂ ಈ ಪರವಾನಗಿ ಪಡೆಯಲು ಅವಕಾಶವಾಗುವಂತೆ ಮುಕ್ತವಾಗಿ ಹರಾಜು ಪ್ರಕ್ರಿಯೆ ನಡೆಸಲು ಇಲಾಖೆ ಮುಂದಾಗಿದೆ ಎಂದರು.

ಪ್ರತಿ ಮದ್ಯದಂಗಡಿಯ ಹರಾಜಿನಿಂದ ಅಂದಾಜು ₹3 ಕೋಟಿಯಿಂದ ₹4 ಕೋಟಿ ವರೆಗೆ ವರಮಾನ ಬರುವ ನಿರೀಕ್ಷೆಯಿದೆ. ಈ ಪ್ರಸ್ತಾವದ ಬಗ್ಗೆ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ಸಮ್ಮುಖದಲ್ಲಿ ವಿವಿಧ ಹಂತಗಳಲ್ಲಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

**ರಾಜ್ಯದಲ್ಲಿ ಈಗ ಇರುವ ಮದ್ಯದಂಗಡಿಗಳ ಸಂಖ್ಯೆ**

| ಮಾದರಿ | ಸಂಖ್ಯೆ |
|---|---|
| ಸಿಎಲ್–2 (ವೈನ್ ಶಾಪ್) | 3,988 |
| ಸಿಎಲ್–4 (ಕ್ಲಬ್) | 292 |
| ಸಿಎಲ್–7 (ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್) | 2,757 |
| ಸಿಎಲ್–9 (ಬಾರ್ ಮತ್ತು ರೆಸ್ಟೋರೆಂಟ್) | 3,627 |
| ಸಿಎಲ್–11ಸಿ (ಎಂಎಸ್‌ಐಎಲ್) | 1,065 |
| ಆರ್‌ವಿಬಿ (ರಿಟೇಲ್ ವೆಂಡರ್ ಬಿಯರ್) | 876 |
| ವೈನ್ ಟವರ್ನ್ | 197 |
| ವೈನ್ ಬುಟಿಕ್ | 83 |
| ಮೈಕ್ರೋ ಬ್ರೆವರಿ | 71 |
| ಒಟ್ಟು | 12,956 |

### ಮೀಸಲಾತಿ: ರಾಜ್ಯಮಟ್ಟದ ವಕೀಲರ ಪರಿಷತ್ ಸಮಾವೇಶ

# ಅ.15ಕ್ಕೆ ಚರ್ಚೆಗೆ ಸಿ.ಎಂ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ, ನಗರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ವಕೀಲರ ಪರಿಷತ್ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಕ್ಟೋಬರ್ 15ರಂದು ಚರ್ಚೆಗೆ ಆಹ್ವಾನಿಸಿದರು.

ಕೂಡಲಸಂಗಮದ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ವಕೀಲರ ಪರಿಷತ್, ನ್ಯಾಯಪೀಠ–ಕೂಡಲಸಂಗಮ, ಜಿಲ್ಲಾ ವಕೀಲರ ಪರಿಷತ್ ಸಹಯೋಗದಲ್ಲಿ ರಾಜ್ಯದ ವಿವಿಧೆಡೆಯಿಂದ ಪಂಚಮಸಾಲಿ ಸಮಾಜದ ವಕೀಲರು ಸಮಾವೇಶಗೊಂಡರು. ಇಡೀ ದಿನ ಚರ್ಚೆ ನಡೆಸಿದರು.

'ವಾರದೊಳಗೆ ಭೇಟಿಯಾಗಲು ಮುಖ್ಯಮಂತ್ರಿ ಸಮಯ ನೀಡಬೇಕು, ಇಲ್ಲದಿದ್ದರೆ ಈ ಸ್ಥಳದಿಂದಲೇ ತೀವ್ರ ಹೋರಾಟಕ್ಕೆ ಚಾಲನೆ ನೀಡಲಾಗುವುದು' ಎಂದು ವಕೀಲರು ಪಟ್ಟು ಹಿಡಿದರು. 'ಮೀಸಲಾತಿ ವಿಚಾರವಾಗಿ ಚರ್ಚಿಸಲು ಮುಖ್ಯಮಂತ್ರಿ ಅವರು ಅಕ್ಟೋಬರ್ 15ರಂದು ಸಮಯ ನೀಡಿರುವ ವಿಚಾರವನ್ನು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಇದಕ್ಕೆ ಒಪ್ಪದ ವಕೀಲರು ಸ್ವತಃ ಸಿದ್ದರಾಮಯ್ಯ ಅವರೇ ಸ್ವಾಮೀಜಿ ಅವರಿಗೆ ಫೋನ್ ಮಾಡಿ ತಿಳಿಸಬೇಕು ಎಂದು ಪಟ್ಟು ಹಿಡಿದರು. ಸ್ಥಳದಲ್ಲಿದ್ದ ಶಾಸಕ ವಿನಯ ಕುಲಕರ್ಣಿ ಸಿದ್ದರಾಮಯ್ಯ ಅವರಿಗೆ ಮೊಬೈಲ್ ಕರೆ ಮಾಡಿ ವಿಷಯ ತಿಳಿಸಿದರು. 'ದಸರಾ ಮುಗಿದ ಬಳಿಕ ಎಲ್ಲರೂ ಕುಳಿತು ಮಾತನಾಡೋಣ. ಹೋರಾಟ ಮುಂದುವರಿಸಬೇಡಿ' ಎಂದು ಸಿದ್ದರಾಮಯ್ಯ ಮಾಡಿಕೊಂಡ ಮನವಿಗೂ ಪರ–ವಿರೋಧ ಚರ್ಚೆಗೆ ಆರಂಭವಾಗಿ ಇಡೀ ಸಭಾಂಗಣ ಗದ್ದಲದಿಂದ ಕೂಡಿತು. ರಾಣಿ ಚನ್ನಮ್ಮ ವೃತ್ತಕ್ಕೆ ಹೋಗಿ ತಕ್ಷಣವೇ ಹೋರಾಟ ಆರಂಭಿಸಲು ಮುಂದಾದರು.

ವೃತ್ತದಲ್ಲಿ ಈದ್ ಮಿಲಾದ್ ಅಂಗವಾಗಿ ಮುಸ್ಲಿಮರ ಬೃಹತ್ ಮೆರವಣಿಗೆ ನಡೆದಿರುವ ಕಾರಣ ಪ್ರತಿಭಟನೆ ಬೇಡ ಎಂಬ ಶಾಸಕರಾದ ವಿನಯ ಕುಲಕರ್ಣಿ, ಎಸ್.ಎಸ್.ಪಾಟೀಲ ಮನವಿಗೆ ಸ್ಪಂದಿಸಿ ಅದನ್ನು ಕೈಬಿಟ್ಟರು.

**ನಿರ್ಬಂಧದ ನಡುವೆಯೂ ಪಾಲ್ಗೊಂಡ ಯತ್ನಾಳ:** 'ಈದ್ ಮಿಲಾದ್ ಮೆರವಣಿಗೆ ಇದ್ದ ಕಾರಣ ಕೋಮು ಸೌಹಾರ್ದ ಕಾಪಾಡುವ ದೃಷ್ಟಿಯಿಂದ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಮಾವೇಶದಲ್ಲಿ ಪಾಲ್ಗೊಳ್ಳಬಾರದು' ಎಂದು ಜಿಲ್ಲಾಧಿಕಾರಿ ನಿರ್ಬಂಧ ಹೇರಿದ್ದರು. ಆದರೂ ಯತ್ನಾಳ ಸಮಾವೇಶದಲ್ಲಿ ಪಾಲ್ಗೊಂಡು ವೇದಿಕೆ ಮೇಲೆ ಭಾಷಣ ಮಾಡಿದರು.


ವಕೀಲರ ಪರಿಷತ್‌ನಲ್ಲಿ ಪಂಚಮಸಾಲಿ ಸಮಾಜದ ವಕೀಲರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡರು ಪ್ರಜಾವಾಣಿ ಚಿತ್ರ

**3 ನಿರ್ಣಯಗಳು**

- ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಕಡ್ಡಾಯವಾಗಿ 2ಎ ಮೀಸಲಾತಿ ನೀಡಬೇಕು
- ಲಿಂಗಾಯತರ ಎಲ್ಲ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು. ಇದಕ್ಕೆ ರಾಜ್ಯ ಸರ್ಕಾರವೇ ಕೇಂದ್ರದ ಮೇಲೆ ಒತ್ತಡ ತರಬೇಕು
- ಅಕ್ಟೋಬರ್ 15ರಂದು ಮೀಸಲಾತಿ ವಿಚಾರವಾಗಿ ಚರ್ಚೆಗೆ ಅವಕಾಶ ಕೊಡಬೇಕು. ಕೊಡದೇ ಇದ್ದರೆ 10 ಸಾವಿರ ವಕೀಲರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕು ಎಂಬ ಮೂರು ನಿರ್ಣಯಗಳನ್ನು ಅಂಗೀಕರಿಸಲಾಯಿತು.

### ನಗರಸಭೆ ವ್ಯಾಪ್ತಿಯಲ್ಲಿದ್ದರೂ ರಸ್ತೆ ವ್ಯವಸ್ಥೆ ಇಲ್ಲದ ಗುಡ್ಡೆಹಳ್ಳಿ ಗ್ರಾಮ

# ಕೋಲಿಗೆ ಶವ ಕಟ್ಟಿ ಸಾಗಿಸಿದರು

ಪ್ರಜಾವಾಣಿ ವಾರ್ತೆ

ಕಾರವಾರ: ನಗರಸಭೆ ವ್ಯಾಪ್ತಿಯಲ್ಲೇ ಇದ್ದರೂ ರಸ್ತೆ ವ್ಯವಸ್ಥೆ ಹೊಂದಿಲ್ಲದ ಗುಡ್ಡೆಹಳ್ಳಿ ಗ್ರಾಮದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರಿಂದ ಅವರ ಶವವನ್ನು ಭಾನುವಾರ ಗ್ರಾಮಸ್ಥರು ಮರದ ಕೋಲಿಗೆ ಕಟ್ಟಿ ಐದು ಕಿ.ಮೀ ದೂರದವರೆಗೆ ಹೊತ್ತು ಸಾಗಿಸಿದರು.

ಗ್ರಾಮದ ರಾಮಾ ಮನ್ನಾ ಗೌಡ (60) ಶನಿವಾರ ತಡರಾತ್ರಿ ಹೃದಯಾಘಾತಕ್ಕೆ ಒಳಗಾಗಿದ್ದರು. ಅವರನ್ನು ಜಿಲ್ಲಾಸ್ಪತ್ರೆಗೆ ಹೊತ್ತುಕೊಂಡು ಕರೆತರಲಾಗಿತ್ತು. ಆಸ್ಪತ್ರೆಗೆ ತರುವಷ್ಟರಲ್ಲೇ ಅವರು ಮೃತಪಟ್ಟಿದ್ದರಿಂದ ಆಂಬುಲೆನ್ಸ್ ಮೂಲಕ ಮೃತದೇಹವನ್ನು ನಗರದ ಹೈಚರ್ಚ್ ರಸ್ತೆ ಕೊನೆಗೊಳ್ಳುವವರೆಗೆ ತರಲಾಯಿತು. ಅಲ್ಲಿಂದ ಗುಡ್ಡ ಏರಲು ವ್ಯವಸ್ಥಿತ ರಸ್ತೆ ಇಲ್ಲದ್ದರಿಂದ ಶವವನ್ನು ಅಲ್ಲಿಯೇ ಇಳಿಸಿ ವಾಹನ ಮರಳಿತ್ತು.

ಗ್ರಾಮದ ಐದಾರು ಮಂದಿ ಸೇರಿ ಶವಕ್ಕೆ ಕಂಬಳಿ ಸುತ್ತಿ, ಅದನ್ನು ಉದ್ದನೆಯ ದಪ್ಪ ಕೋಲಿಗೆ ಹಗ್ಗದ ಮೂಲಕ ಕಟ್ಟಿಕೊಂಡು ಸಾಗಿಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ್, ಮಾಜಿ ಸಚಿವ ಆನಂದ್ ಅಸ್ನೋಟಿಕರ್ ಕೂಡ ಸ್ಥಳದಲ್ಲಿದ್ದರು.

ನಗರದ ವಾರ್ಡ್ ನಂ.31ರ ವ್ಯಾಪ್ತಿಯಲ್ಲಿರುವ ಗುಡ್ಡೆಹಳ್ಳಿ ಗ್ರಾಮವು ಎತ್ತರದ ಗುಡ್ಡದ ಮೇಲಿದೆ. ಹಿಂದುಳಿದ ಹಾಲಕ್ಕಿ ಸಮುದಾಯಕ್ಕೆ ಸೇರಿ ಜನರ 12ಕ್ಕೂ ಹೆಚ್ಚು ಮನೆಗಳಿವೆ. ಗ್ರಾಮಕ್ಕೆ ಕಚ್ಚಾ ರಸ್ತೆ ಮಾತ್ರ ಸಂಚಾರಕ್ಕೆ ಆಧಾರವಾಗಿದ್ದು, ದ್ವಿಚಕ್ರ ವಾಹನ ಮಾತ್ರ ಸಾಗಲು ಅವಕಾಶವಿದೆ. ಮಳೆಗಾಲದಲ್ಲಿ ಕಾಲ್ನಡಿಗೆ ಹೊರತಾಗಿ ಜನರು ಸಂಚರಿಸಲು ಆಗುತ್ತಿಲ್ಲ.

'ಗುಡ್ಡೆಹಳ್ಳಿಗೆ ರಸ್ತೆ ನಿರ್ಮಿಸಲು ಹಲವು ವರ್ಷದಿಂದ ಜನರು ಒತ್ತಡ ಹೇರುತ್ತಿದ್ದರೂ ಈವರೆಗೆ ಕ್ರಮವಾಗಿಲ್ಲ. ಒಂದೂವರೆ ಕಿ.ಮೀ ಜಲ್ಲಿ ರಸ್ತೆ ಮಂಜೂರಾಗಿದ್ದು ಸದ್ಯ ಕಾಮಗಾರಿಯೂ ನಿಂತಿದೆ. ಈ ಘಟನೆಯಿಂದಾದರೂ ಆಡಳಿತ ವ್ಯವಸ್ಥೆ ಎಚ್ಚೆತ್ತು ಗ್ರಾಮಕ್ಕೆ ರಸ್ತೆ ನಿರ್ಮಿಸಿಕೊಡಲಿ' ಎಂದು 31ನೇ ವಾರ್ಡ್‌ನ ನಗರಸಭೆ ಸದಸ್ಯೆ ರುಕ್ಮಿಣಿ ಗೌಡ ಪ್ರತಿಕ್ರಿಯಿಸಿದ್ದಾರೆ.



ಕಾರವಾರದ ಗುಡ್ಡೆಹಳ್ಳಿಯ ರಾಮಾ ಗೌಡ ಅವರ ಶವಕ್ಕೆ ಗ್ರಾಮಸ್ಥರು ಕಂಬಳಿ ಸುತ್ತಿ, ಕೋಲಿಗೆ ಕಟ್ಟಿಕೊಂಡು ಭನುವಾರ ಹೊತ್ತೊಯ್ದರು

## ಭಾವಚಿತ್ರ ದುರ್ಬಳಕೆ: ಕ್ಷಮಾಪಣೆಗೆ ಚಂದ್ರಕಾಂತ ವಡ್ಡು ತಾಕೀತು

ಪ್ರಜಾವಾಣಿ ವಾರ್ತೆ


ಚಂದ್ರಕಾಂತ ವಡ್ಡು

ಕಲಬುರಗಿ: 'ಕಲ್ಯಾಣ ಕರ್ನಾಟಕ ಉತ್ಸವ ಮತ್ತು 371 (ಜೆ) ದಶಕದ ಸಂಭ್ರಮದ ವೇಳೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು (ಕೆಕೆಆರ್‌ಟಿಸಿ) ಸಾಧಕರ ಛಾಯಾಚಿತ್ರ ಪ್ರದರ್ಶನದಲ್ಲಿ ನನ್ನ ಭಾವಚಿತ್ರವನ್ನು ದುರ್ಬಳಕೆ ಮಾಡಿಕೊಂಡು ನನ್ನ ವರ್ಚಸ್ಸು ಹಾಗೂ ಓದುಗರ ಭಾವನೆಗಳಿಗೆ ಗಾಸಿಗೊಳಿಸಿದ್ದು, ಈ ಬಗ್ಗೆ ಕ್ಷಮೆ ಕೇಳಬೇಕು' ಎಂದು ಪತ್ರಕರ್ತ ಚಂದ್ರಕಾಂತ ವಡ್ಡು ಅವರು ಪತ್ರದ ಮೂಲಕ ಕೆಕೆಆರ್‌ಟಿಸಿಗೆ ತಾಕೀತು ಮಾಡಿದ್ದಾರೆ.

'ಈಚೆಗೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಲೇಖಕರ ಪರಿಚಯದ ಛಾಯಾಚಿತ್ರ ಪ್ರದರ್ಶನ ಆಯೋಜಿಸಿತ್ತು. ಈ ಪ್ರದರ್ಶನದಲ್ಲಿ ನನ್ನ ಭಾವಚಿತ್ರದೊಂದಿಗೆ ಈಚೆಗೆ ನಿಧನರಾದ ಕತೆಗಾರ ರಾಜಶೇಖರ ನೀರಮಾನ್ವಿ ಅವರ ಸಾಧನೆ, ನಿಧನ ದಿನಾಂಕ ಸಹಿತ ಅಸಂಬದ್ಧವಾಗಿ ಜೋಡಿಸುವ ಮೂಲಕ ದಿ. ಕತೆಗಾರರಿಗೆ ಮತ್ತು ಜೀವಂತ ಇರುವ ನನಗೆ ಏಕಕಾಲಕ್ಕೆ ಅಪಮಾನ ಮಾಡಲಾಗಿದೆ. ಸರ್ಕಾರದ ಜವಾಬ್ದಾರಿಯುತ ಸಂಸ್ಥೆಯೊಂದರಿಂದ ಇಂತಹ ಅನುಚಿತ ನಡೆಯನ್ನು ಯಾರೂ ನಿರೀಕ್ಷಿಸುವುದಿಲ್ಲ. ಈ ಅಚಾತುರ್ಯದ ಬಗ್ಗೆ ನಾಡಿನ ಪ್ರಜ್ಞಾವಂತರು ಆಘಾತ ಮತ್ತು ಟೀಕೆಗಳನ್ನು ವ್ಯಕ್ತಪಡಿಸಿದ್ದಾರೆ' ಎಂದು ಹೇಳಿದ್ದಾರೆ.

'ನನ್ನ ಅನುಮತಿ ಇಲ್ಲದೆ ಭಾವಚಿತ್ರವನ್ನು ತಪ್ಪು ಸ್ಥಳದಲ್ಲಿ ಸಾರ್ವಜನಿಕವಾಗಿ ದುರ್ಬಳಕೆ ಮಾಡಿದ್ದರಿಂದ ನನ್ನ ಖಾಸಗಿತನಕ್ಕೂ ಹಾನಿಯಾಗಿದೆ. ಈ ಪ್ರಮಾದಕ್ಕಾಗಿ ಸಂಸ್ಥೆಯಿಂದ ಕ್ಷಮಾಪಣೆ ಮತ್ತು ಹಾನಿಗೆ ಸೂಕ್ತ ಪರಿಹಾರ ನಿರೀಕ್ಷಿಸುತ್ತೇವೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.